ಬೆವಿಕಂ

BESCOM

# ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೊಳಪಟ್ಟಿದೆ)

(CIN: U04010KA2002SGC030438)

## ಸಾರ್ವಜನಿಕ ಪ್ರಕಟಣೆ

**ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದ ಆರ್ಥಿಕ ವರ್ಷ–22ರ ಅನ್ವಯದಂತೆ ವಿದ್ಯುತ್ ದರ ಪರಿಷ್ಕರಣೆ**

ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗವು ವಿದ್ಯುಚ್ಛಕ್ತಿ ಕಾಯಿದೆ, ಪರಿಚ್ಛೇದ 62, 64 ಮತ್ತು ಇತರೆ ನಿಯಮಾನುಸಾರ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ದಿನಾಂಕ: 09.06.2021ರಂದು ಆರ್ಥಿಕ ವರ್ಷ–22, ಏಪ್ರಿಲ್ 1ರಿಂದ ಅನ್ವಯವಾಗುವಂತೆ ವಿದ್ಯುತ್ ದರಗಳನ್ನು ಪರಿಷ್ಕರಿಸಿದೆ.

ಸದರಿ ವಿದ್ಯುತ್ ದರ ಪರಿಷ್ಕರಣೆಯ ಮುಖ್ಯಾಂಶಗಳು:

- ಎಲ್‌ಟಿ ಮತ್ತು ಎಚ್‌ಟಿ ಗೃಹಬಳಕೆಯ ವರ್ಗಕ್ಕೆ ವಿದ್ಯುತ್ ಬಳಕೆ ಶುಲ್ಕದಲ್ಲಿ ಪ್ರತಿ ಯೂನಿಟ್‌ಗೆ 10 ಪೈಸೆ ಹೆಚ್ಚಿಸಲಾಗಿದೆ.
- ಎಲ್‌ಟಿ ಮತ್ತು ಎಚ್‌ಟಿ ಶಿಕ್ಷಣ ಸಂಸ್ಥೆಗಳು ಮತ್ತು ಆಸ್ಪತ್ರೆಗಳ ವರ್ಗಕ್ಕೆ ವಿದ್ಯುತ್ ಬಳಕೆ ಶುಲ್ಕಗಳನ್ನು ಪ್ರತಿ ಯೂನಿಟ್‌ಗೆ 10 ಪೈಸೆ ಹೆಚ್ಚಿಸಲಾಗಿದೆ.
- ಎಲ್‌ಟಿ ಮತ್ತು ಎಚ್‌ಟಿ ವಾಣಿಜ್ಯ ಪ್ರವರ್ಗಗಳಿಗೆ ವಿದ್ಯುತ್ ಬಳಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ 10 ಪೈಸೆ ಹೆಚ್ಚಿಸಲಾಗಿದೆ.
- ಎಲ್‌ಟಿ ಮತ್ತು ಎಚ್‌ಟಿ ಕೈಗಾರಿಕಾ ವಿಭಾಗದಲ್ಲಿ ಗ್ರಾಮೀಣ ಪ್ರದೇಶಗಳು ಮತ್ತು ನಗರ ಪ್ರದೇಶಗಳಿಗೆ ವಿದ್ಯುತ್ ಬಳಕೆ ಶುಲ್ಕವನ್ನು ಪ್ರತಿ ಯೂನಿಟ್‌ಗೆ 10 ಪೈಸೆಯನ್ನು ಹೆಚ್ಚಿಸಲಾಗಿದೆ
- ಎಲ್‌ಟಿ ಮತ್ತು ಎಚ್‌ಟಿ ತಾತ್ಕಾಲಿಕ ಗ್ರಾಹಕರಿಗೆ ವಿದ್ಯುತ್ ಬಳಕೆ ಶುಲ್ಕ ಹೆಚ್ಚಳವು ಪ್ರತಿ ಯೂನಿಟ್‌ಗೆ 10 ಪೈಸೆ ಮತ್ತು ನಿಗದಿತ ಶುಲ್ಕ ರೂ. 25 ಪ್ರತಿ ಕಿಲೋ ವ್ಯಾಟ್ / ಎಚ್‌ಪಿಗೆ.
- ಎಲ್ಲಾ ವರ್ಗದ ಗ್ರಾಹಕರಿಗೆ ಪ್ರತಿ ಕಿಲೋ ವ್ಯಾಟ್ / ಎಚ್‌ಪಿ / ಕೆವಿಎಗೆ ನಿಗದಿತ ಶುಲ್ಕವು ರೂ. 10 ರಿಂದ ರೂ. 20 ರಷ್ಟು ಹೆಚ್ಚಿಸಲಾಗಿದೆ ಹಾಗೂ ತಾತ್ಕಾಲಿಕ ಪೂರೈಕೆಗೆ ಪ್ರತಿ ಕಿಲೋ ವ್ಯಾಟ್ / ಎಚ್‌ಪಿಗೆ ರೂ. 25 ಹೆಚ್ಚಿಸಲಾಗಿದೆ.
- ಒಟ್ಟಾರೆ ಜಕಾತಿ ಹೆಚ್ಚಳವು ಶೇ.3.69ರಷ್ಟಿರುತ್ತದೆ.
- **ಪರಿಷ್ಕೃತ ದರಗಳು 2021 ರ ಏಪ್ರಿಲ್ 1 ರಂದು ಅಥವಾ ಅದರ ನಂತರದ ಮೊದಲ ಮೀಟರ್ ಓದುವ ದಿನಾಂಕದಿಂದ ಬಳಕೆ ಮಾಡುವ ವಿದ್ಯುಚ್ಛಕ್ತಿಗೆ ಅನ್ವಯವಾಗುತ್ತದೆ.**
- **ಕೋವಿಡ್–19 ಸಾಂಕ್ರಾಮಿಕ ರೋಗದಿಂದಾಗಿ ಚಾಲ್ತಿಯಲ್ಲಿರುವ ಲಾಕ್‌ಡೌನ್ ಪರಿಸ್ಥಿತಿಯಲ್ಲಿ, ಏಪ್ರಿಲ್–2021 ಮತ್ತು ಮೇ–2021 ರ ತಿಂಗಳ ದರ ಪರಿಷ್ಕರಣೆಯ ಬಾಕಿಯನ್ನು ಯಾವುದೇ ಬಡ್ಡಿಯನ್ನು ವಿಧಿಸದೇ ಅಕ್ಟೋಬರ್–2021 ಮತ್ತು ನವಂಬರ್–2021 ರ ತಿಂಗಳಲ್ಲಿ ಕ್ರಮವಾಗಿ ವಸೂಲಿ ಮಾಡಲು ಆದೇಶಿಸಿದೆ.**
- ಕಡಿಮೆ ಮತ್ತು ಮಧ್ಯಮ ವರ್ಗದ ಗೃಹ ಬಳಕೆಯ ಗ್ರಾಹಕರ ವಿದ್ಯುಚ್ಛಕ್ತಿಯ ಬಳಕೆಯನ್ನು ಉತ್ತೇಜಿಸಲು, 0–30 ಯೂನಿಟ್‌ಗಳ ಮೊದಲ ಹಂತವನ್ನು 0–50 ಯೂನಿಟ್‌ಗಳಿಗೆ ಹೆಚ್ಚಿಸಲಾಗಿದೆ.
- ಸಮಯಾಧಾರಿತ ವಿದ್ಯುತ್ (ಟಿಒಡಿ)ಜಕಾತಿಯಡಿಯಲ್ಲಿ, ಜುಲೈನಿಂದ ನವೆಂಬರ್ ವರೆಗಿನ ಮಳೆಗಾಲದ ಅವಧಿಯಲ್ಲಿ ಎಚ್‌ಟಿ 2 (ಎ), (ಬಿ) ಮತ್ತು (ಸಿ) ಪ್ರವರ್ಗಗಳಿಗೆ ಸಂಬಂಧಿಸಿದಂತೆ ಸಂಜೆಯ ಗರಿಷ್ಠ ಅವಧಿಯಲ್ಲಿ 18:00 ಗಂಟೆಯಿಂದ 22:00 ಗಂಟೆಯವರೆಗಿನ ವಿದ್ಯುತ್ ಬಳಕೆಗೆ ವಿಧಿಸಲಾಗುತ್ತಿದ್ದ ದಂಡವನ್ನು ಹಿಂಪಡೆಯಲಾಗಿದೆ. ಆದಾಗ್ಯೂ, ಈ ಆದೇಶದಲ್ಲಿ ಬಿಎಂಆರ್‌ಸಿಎಲ್ ಮತ್ತು ರೈಲ್ವೆ ಟ್ರಾಕ್ಷನ್ ಸ್ಥಾವರಗಳನ್ನು ಹೊರತುಪಡಿಸಿ ಸಂಜೆಯ ಗರಿಷ್ಠ ಬಳಕೆಗೆ ದಂಡವನ್ನು ಡಿಸೆಂಬರ್‌ನಿಂದ ಜೂನ್‌ವರೆಗೆ ಮುಂದುವರಿಸಲಾಗುತ್ತದೆ.
- ಜುಲೈ ತಿಂಗಳಿಂದ ನವೆಂಬರ್ ವರೆಗೆ ಮಳೆಗಾಲದಲ್ಲಿ 22:00 ಗಂಟೆಯಿಂದ 06:00 ಗಂಟೆಯವರೆಗೆ (ಮುಂದಿನ ದಿನ) ವಿದ್ಯುತ್ ಬಳಕೆಗಾಗಿ ಪ್ರತಿ ಯೂನಿಟ್‌ಗೆ 100 ಪೈಸೆಗಳ ಟಿಒಡಿ ರಿಯಾಯಿತಿಯನ್ನು ಹಿಂಪಡೆಯಲಾಗಿದೆ. ಆದಾಗ್ಯೂ, ಡಿಸೆಂಬರ್‌ನಿಂದ ಜೂನ್‌ವರೆಗೆ 22:00 ಗಂಟೆಯಿಂದ 06:00 ಗಂಟೆಯ ವರೆಗೆ ವಿದ್ಯುತ್ ಬಳಕೆಗಾಗಿ ಪ್ರತಿ ಯೂನಿಟ್‌ಗೆ 100 ಪೈಸೆಗಳ ಟಿಒಡಿ ಪ್ರೋತ್ಸಾಹವನ್ನು ಮುಂದುವರಿಸಲಾಗಿದೆ.
- ಮಳೆಗಾಲದ ಅವಧಿಯಲ್ಲಿ ಹೆಚ್ಚುವರಿ ವಿದ್ಯುತ್ ಮಾರಾಟವನ್ನು ಉತ್ತೇಜಿಸುವ ಸಲುವಾಗಿ, ಎಚ್‌ಟಿ 2 (ಎ), (ಬಿ) ಮತ್ತು (ಸಿ) ಪ್ರವರ್ಗಗಳಿಗೆ ಆರ್ಥಿಕ ವರ್ಷ–22ರಲ್ಲಿ ಮೂಲ/ಕ್ರಮಬದ್ಧ ಬಳಕೆಗಿಂತ ಹೆಚ್ಚಿನ ವಿದ್ಯುಚ್ಛಕ್ತಿ ಬಳಕೆಗೆ ಪ್ರತಿಯೂನಿಟ್‌ಗೆ ರೂ.6 ರಂತೆ ವಿದ್ಯುತ್ ಮಾರಾಟ ಮಾಡಲು "ರಿಯಾಯಿತಿ ವಿದ್ಯುಚ್ಛಕ್ತಿ ದರ" ಯೋಜನೆಯನ್ನು ಅನುಮೋದಿಸಿದೆ.
- ವಿದ್ಯುತ್ ಮಾರಾಟವನ್ನು ಹೆಚ್ಚಿಸಲು ಮತ್ತು ಗ್ರಾಹಕರನ್ನು ಎಸ್ಕಾಂಗಳ ಕಡೆಗೆ ಆಕರ್ಷಿಸುವ ಸಲುವಾಗಿ, ಆಯೋಗವು ಅಸ್ತಿತ್ವದಲ್ಲಿರುವ "ವಿಶೇಷ ಪ್ರೋತ್ಸಾಹಕ ಯೋಜನೆ"ಯನ್ನು ಎಚ್‌ಟಿ ವರ್ಗಕ್ಕೆ ಆರ್ಥಿಕ ವರ್ಷ–22 ರ ಅವಧಿಯಲ್ಲಿ ಇನ್ನೂ ಒಂದು ವರ್ಷ ಮುಂದುವರಿಸಲು ನಿರ್ಧರಿಸಿದೆ.
- ಬಿಎಂಆರ್‌ಸಿಎಲ್ ಸ್ಥಾವರಗಳ ಜಕಾತಿ ದರವನ್ನು ಹೆಚ್ಚಿಸಿರುವುದಿಲ್ಲ ಮತ್ತು ಪ್ರಸ್ತುತ ಇರುವ ಪ್ರತಿ ಯೂನಿಟ್‌ಗೆ ರೂ.5.20 ರಿಯಾಯಿತಿ ದರವನ್ನು ಮತ್ತು ರೂ.220 / ಕೆವಿಎ ಬೇಡಿಕೆ ಶುಲ್ಕವನ್ನು ಮುಂದುವರಿಸಲು ಅನುಮೋದಿಸಿದೆ.
- ಗ್ರಾಹಕರ ಸ್ಥಾವರಗಳ ಆವರಣಗಳಲ್ಲಿ ಸ್ಥಾಪಿತವಾದ ತ್ಯಾಜ್ಯ ಸಂಸ್ಕರಣಾ ಘಟಕ ಮತ್ತು ಒಳಚರಂಡಿ/ಕೊಳಚೆನೀರು ಸಂಸ್ಕರಣಾ ಘಟಕಗಳಿಗೆ ಆಯಾ ವರ್ಗದ ಸ್ಥಾವರಗಳಿಗೆ ಅನ್ವಯವಾಗುವ ದರದಲ್ಲಿ ಬಿಲ್ಲು ಮಾಡುವುದನ್ನು ಮುಂದುವರೆಸಲಾಗಿದೆ.
- ಘನತ್ಯಾಜ್ಯಗಳ ಸಂಸ್ಕರಣೆಯಿಂದಾಗುವ ಪರಿಸರ ಮತ್ತು ಸಾಮಾಜಿಕ ಪರಿಣಾಮಗಳನ್ನು ಪರಿಗಣಿಸಿ ಆಯೋಗವು, ಕೈಗಾರಿಕೆಗಳ ಆವರಣದಲ್ಲಿ ಇರುವ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ಎಲ್‌ಟಿ ಮತ್ತು ಎಚ್‌ಟಿ ಕೈಗಾರಿಕಾ ವರ್ಗದ ದರ ಅನ್ವಯಿಸುವುದನ್ನು ಮುಂದುವರಿಸಿದೆ.
- ಎಲ್‌ಟಿ4C(i) ಮತ್ತು ಎಲ್‌ಟಿ4C(ii) ಪ್ರವರ್ಗಗಳನ್ನು ವಿಲೀನಗೊಳಿಸಿ ಎಲ್‌ಟಿ4C ಎಂದು ಮಾಡಲಾಗಿದೆ.
- ಈಸ್ ಆಫ್ ಡೂಯಿಂಗ್ ಬಿಸಿನೆಸ್ (ಇಒಡಿಬಿ) (ವ್ಯವಹಾರ ಸುಗಮೀಕರಣ) ಅಡಿಯಲ್ಲಿ ಆಯೋಗವು 50 ಕಿ.ವ್ಯಾನಿಂದ 150 ಕಿ.ವ್ಯಾ. ವರೆಗಿನ ವಿದ್ಯುತ್ ಹೊರೆಯ ಸಂಪರ್ಕ ಪಡೆಯುವಂತಹ ಎಲ್‌ಟಿ ಸ್ಥಾವರ ಪ್ರವರ್ಗಗಳಿಗೆ ಹೊಸದಾಗಿ ನಿಗದಿತ ಶುಲ್ಕ ಮತ್ತು ವಿದ್ಯುಚ್ಛಕ್ತಿ ಬಳಕೆ ಶುಲ್ಕವನ್ನು ನಿರ್ಧರಿಸಿದೆ.
- ಕರ್ನಾಟಕ ಸರ್ಕಾರದ "ವಿದ್ಯುತ್ ವಾಹನ ಮತ್ತು ಇಂಧನ ಶೇಖರಣಾ ನೀತಿ" ವಿಷಯದ ಹಿನ್ನೆಲೆಯಲ್ಲಿ, ಶುದ್ಧ ಇಂಧನ ಮತ್ತು ವಿದ್ಯುತ್ ವಾಹನ ಬಳಕೆಯನ್ನು ಉತ್ತೇಜಿಸಲು ವಿದ್ಯುತ್ ವಾಹನ ಚಾರ್ಜಿಂಗ್ ಕೇಂದ್ರಗಳಿಗೆ ಪರಿಚಯಿಸಿದ್ದ ಎಲ್‌ಟಿ 6ಸಿ ಅನ್ನು ಯಾವುದೇ ದರ ಹೆಚ್ಚಳವಿಲ್ಲದೇ ಅಸ್ತಿತ್ವದಲ್ಲಿರುವ ರಿಯಾಯಿತಿ ದರ ಪ್ರತಿ ಯೂನಿಟ್ಟಿಗೆ ರೂ. 5 ಅನ್ನು ಮುಂದುವರೆಸಿದೆ. ಕೇಂದ್ರ ಸರ್ಕಾರದ ಮಾರ್ಗಸೂಚಿಯಂತೆ, ಬ್ಯಾಟರಿ ಸ್ವಾಪಿಂಗ್ ಇರುವಂತಹ ವಿದ್ಯುತ್ ವಾಹನಗಳಲ್ಲಿ ಬಳಸುವ ಬ್ಯಾಟರಿಗಳನ್ನು ಚಾರ್ಜ್ ಮಾಡುವ ಘಟಕಗಳಿಗೂ ರಿಯಾಯಿತಿ ದರವನ್ನು ವಿಸ್ತರಿಸಲಾಗಿದೆ.
- ಸಾರ್ವಜನಿಕ ಬೀದಿ ದೀಪಗಳಲ್ಲಿ ಎಲ್‌ಇಡಿ ಬಲ್ಬ್‌ಗಳ ಬಳಕೆಯ ಮೂಲಕ ವಿದ್ಯುಚ್ಛಕ್ತಿಯ ಸಂರಕ್ಷಣೆಯನ್ನು ಉತ್ತೇಜಿಸಲು, ಬಿಬಿಎಂಪಿ ಸೇರಿದಂತೆ ನಗರ ಮತ್ತು ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಂದ ಬೀದಿ ದೀಪ ಅಳವಡಿಕೆಗೆ ಎಲ್‌ಇಡಿ / ಇಂಡಕ್ಷನ್ ಲ್ಯಾಂಪ್ ಲೈಟಿಂಗ್ ಅಳವಡಿಸಿದರೆ ಪ್ರತಿ ಯೂನಿಟ್‌ಗೆ ನೀಡಲಾಗುವ 105 ಪೈಸೆ ರಿಯಾಯಿತಿಯನ್ನು ಮುಂದುವರೆಸಲಾಗಿದೆ.
- ಆಯೋಗವು ನವೀಕರಿಸಬಹುದಾದ ಮೂಲಗಳಿಂದ ಶಕ್ತಿಯ ಖರೀದಿ ಮತ್ತು ಬಳಕೆಯನ್ನು ಉತ್ತೇಜಿಸಲು, ಎಚ್‌ಟಿ ಇಂಡಸ್ಟ್ರೀಸ್ ಮತ್ತು ಎಚ್‌ಟಿ ವಾಣಿಜ್ಯ ಗ್ರಾಹಕರಿಗೆ, ಅವರು ಇಚ್ಛಿಸಿದಲ್ಲಿ, ಅವರಿಗೆ ಅನ್ವಯವಾಗುವ ದರಕ್ಕಿಂತ ಪ್ರತಿ ಯೂನಿಟ್ಟಿಗೆ 50 ಪೈಸೆಯಷ್ಟು ಹೆಚ್ಚಿನ ಹಸಿರು ದರವನ್ನು ಮುಂದುವರಿಸಿದೆ.
- ವಿವರವಾದ ಜಕಾತಿ ಆದೇಶವು ಕವಿನಿ ಆಯೋಗದ ಜಾಲತಾಣದ ಈ ಕೆಳಗಿನ ಲಿಂಕ್ ನಲ್ಲಿ ಲಭ್ಯವಿರುತ್ತದೆ. **https://karunadu.karnataka.gov.in/kerc/Tariff%20Order%202021/Orders/BESCOM%20-%202021.pdf.**

**ಸಹಿ/- ಉಪ ಪ್ರಧಾನ ವ್ಯವಸ್ಥಾಪಕರು (ನಿ.ವ್ಯ) ಬೆವಿಕಂ.**

**ವಿದ್ಯುತ್ ಸಂಬಂಧಿತ ದೂರುಗಳಿಗೆ ಕರೆ ಮಾಡಿ: 1912**

**ಬೆಸ್ಕಾಂ ಮಿತ್ರ ಮೊಬೈಲ್ APP Download ಮಾಡಿಕೊಳ್ಳಿ**

Account Executive | Studio Manager | Copy | Computer | Job No. | Proof Final